## 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:510/2023

**ಸಾಕ್ಷಿಯನ್ನು ದಿಃ 02.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಈಶ್ವರ ಆರ್ | ಸಿಡಬ್ಲ್ಯೂ:8 | ಪಿಡಬ್ಲ್ಯೂ:7 |
| ತಂದೆಯ ಹೆಸರು | ರಾಜಪ್ಪಚಾರ್ ಸಿ. | | |
| ವಯಸ್ಸು | 47 ವರ್ಷ | | |
| ಉದ್ಯೋಗ | ಲೈಬ್ರೇರಿಯನ್ | | |
| ವಾಸಸ್ಥಳ | ಕೊತ್ತೇಗಾಲ. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ 1 ರಿಂದ 7 ರವರು ಗೊತ್ತು. ದಿಃ 27.06.2022 ರಂದು ಬೆಳಿಗ್ಗೆ 9.30 ಕ್ಕೆ ಹುಣಸೂರಿದಿಂದ ಗ್ರಂಥಾಲಯ ಮೇಲ್ವಿಚಾರಕರ ಸಭೆಗೆ ಮಂಡ್ಯಕ್ಕೆ ಟಿಟಿ ವಾಹನದಲ್ಲಿ ಹೋಗಿದ್ದೇವು. ನಂತರ ಸಭೆ ಮುಗಿಸಿಕೊಂಡು ಬರುವಾಗ ರಾತ್ರಿ 8.00 ಗಂಟೆ ಸಮಯದಲ್ಲಿ ಮಲ್ಲಿನಾಥ ಪುರ ಗ್ರಾಮದ ಹತ್ತಿರ ನಾವು ಬರುತ್ತಿದ್ದಂತಹ ಟೆಂಪೂ ಟ್ರಾವೇಲ್ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಎದುರುಗಡೆ ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ ಡಿಕ್ಕಿ ಪಡಿಸಿದರು. ಟೆಂಪೂದಲ್ಲಿ ಕುಳಿತಿದ್ದ ನಾಗಯ್ಯ ಎಂಬ ಮೇಲ್ವಿಚಾರಕರು ಸ್ಥಳದಲ್ಲೆ ಮೃತ ಪಟ್ಟರು. ಜ್ಯೋತಿ ಎಂಬುವವರ ತಲೆಗೆ ತೀವ್ರವಾಗಿ ಪೆಟ್ಟಾಗಿದ್ದು, ಅವರಿಗೆ ಆಸ್ಪತ್ರೆಗೆ ಸೇರಿಸಲಾಯಿತು. ವಾಹನದಲ್ಲಿ ಇದ್ದ ಉಳಿದವರಿಗೊ ಸಣ್ಣ ಪುಟ್ಟ ಗಾಯಗಳಾಗಿ ಆಸ್ಪತ್ರೆಗೆ ಸೇರಿದ್ದೇವು. ಯಶೋಧ ರವರ ಬಲಗಡೆಯ ಬೆನ್ನು ಮೂಳೆ ಮುರಿದಿತ್ತು.

ಕೆಲವರನ್ನು ಹುಣಸೂರು ಆಸ್ಪತ್ರೆಗೆ, ಇನ್ನೂ ಕೆಲವರನ್ನು ಮೈಸೂರಿನ ಆಸ್ಪತ್ರಗೆ ಚಿಕಿತ್ಸೆಗೆ ಸೇರಿಸಲಾಗಿತ್ತು. ನನಗೆ ಸ್ವಲ್ಪ ಕಾಲು ನೋವು ಅಗಿತ್ತು. ಜ್ಯೋತಿ ಎಂಬವರು ಮಾರನೆ ದಿನ ತೀರಿಕೊಂಡರು ಎಂದು ಗೊತ್ತಾಯಿತು. ಸದರಿ ಅಪಘಾತ ಟೆಂಪೂ ಟ್ರಾವೆಲ್ ಚಾಲಕನ ತಪ್ಪಿನಿಂದ ಆಗಿರುತತದೆ. ಸದರಿ ಚಾಲಕ ನ್ಯಾಯಾಲಯದ ಮುಂದೆ ಇರುತ್ತಾನೆ ಎಂದು ನೋಡಿ ಗುರುತಿಸಿರುತ್ತಾರೆ. ನಾನು ಹೋಗುತ್ತಿದ್ದ ಟೆಂಪೂ ನೋಡಿದರೆ ಗುರುತಿಸುತ್ತೇನೆ. ನಿಪಿ. 3 ರಿಂದ 7 ರ ಟೆಂಪೂ ಟ್ರಾವೆಲ್ ವಾಹನದ ಪೋಟೊವನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಕು. ಎಂ.ಆರ್ ವಕೀಲರಿಂದಃ</u>**

ಟೆಂಪೂ ಟ್ರಾವೆಲ್ ವಾಹನದ ನಂಬರ್ ಅನ್ನು ನಾನು ಗಮನಿಸಿರಲ್ಲಿ. ಸದರಿ ವಾಹನದಲ್ಲಿ ನಾವು 13 ಜನ ಇದ್ದೇವು. ನಾನು ಸದರಿ ವಾಹದ ಕೊನೆಯ ಸಿಟೆನಲ್ಲಿ ಕುಳಿತಿದ್ದೆ. ಹುಣಸೂರಿನಿಂದ ಮಂಡ್ಯಕ್ಕೆ ಹೋಗುವಾಗ ನಿಧಾನವಾಗಿಯೆ ವಾಹನವನ್ನು ಚಾಲನೆ ಮಾಡಿದ್ದರು ಎಂದರೆ ಸರಿ. ಮಂಡ್ಯದಿಂದ ಬರುವ ಸಮಯದಲ್ಲಿ ಮಳೆ ಬರುತ್ತಿತ್ತು ಎಂದರೆ ಸರಿ. ನಾನು ವಾಹನದಲ್ಲಿ ಹಿಂಬಾಗದ ಸೀಟಿನಲ್ಲಿ ಕುಳಿತಿದ್ದ ಕಾರಣ ವಾಹನ ಎಷ್ಟು ವೇಗವಾಗಿ ಹೋಗುತ್ತಿತ್ತು ಎಂದು ನಾನು ನೋಡಲಿಲ್ಲ. ವಾಹನದಲ್ಲಿ ಇದ್ದ ಸಹೋದ್ಯೋಗಿಗಳೆಲ್ಲರೂ ಮಲಗಿದ್ದರು ಎಂದರೆ ಸರಿಯಲ್ಲ. ವಾಹನದ ಮುಂದೆ ಆ ಸಮಯದಲ್ಲಿ ಕತ್ತಲೆ ಇತ್ತು ಮತ್ತು ಮಳೆ ಬರುತ್ತಿತ್ತು ಎಂದರೆ ನಾನು ಅಪಘಾತ ಅದನಂತರ ನೋಡಿರುತ್ತೇನೆ ಎನ್ನುತ್ತಾರೆ.

ನಾನು ಅಪಘಾತ ಅದ ನಂತರ ನೋಡಿದ ಕಾರಣ ಅದಕ್ಕೂ ಮೊದಲು ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ವಿಮಾ ಪರಿಹಾರಕ್ಕಾಗಿ ಯಾವುದೆ ಕೇಸು ದಾಖಲಿಸಿಲ್ಲ. ಟೆಂಪೂ ಟ್ರಾವೆಲ್ ಚಾಲಕನ ತಪ್ಪಿನಿಂದ ಸದರಿ ಅಪಘಾತ ಆಗಿಲ್ಲ, ಎದುರುಗಡೆಯಿಂದ

ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸಸು ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಮೈಸೂರು ಕಡೆಯಿಂದ ಬರುತ್ತಿದ್ದಾಗ ರಸ್ತೆ ಎರ ರಸ್ತೆ ಇದ್ದು, ಹುಣಸೂರಿನಿಂದ ಹೋಗುವಾಗ ರಸ್ತೆ ಇಳಿಜಾರು ಇದ್ದ ಕಾರಣ ಚಾಲಕ ನಿಧಾನವಾಗಿ ಬರುತ್ತಿದ್ದ ಎಂದರೆ ಸರಿಯಲ್ಲ. ರಸ್ತೆ ಮಧ್ಯದಲ್ಲಿ ಬ್ಯಾರಿಕೇಡ್ ಇಲ್ಲ ಎಂದರೆ ಸರಿಯಲ್ಲ. ಅಪಘಾತನಿಂದ ಪರಿಹಾರ ಸಿಗಲಿ ಎಂದು ಆರೋಪಿ ತಪ್ಪಿನಿಂದ ಅಪಘಾತ ಆಗದೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟೆಂಪೂ ಟ್ರಾವೆಲ್ ಚಾಲಕ ನಿಧಾನವಾಗಿಯೆ ಚಾಲನೆ ಮಾಡುತ್ತಿದ್ದರೂ ಅವರ ತಪ್ಪಿನಿಂದ ಯಾವುದೆ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.